CC No. 437/2014
PW- 5

**ದಿನಾಂಕಃ 30-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ Sri. ACD ವಕೀಲರಿಂದಃ</u>**

ನಮ್ಮ ಸಂಸ್ಥೆಯ ಕಾರ್ಯದರ್ಶಿ ತಾಮಣ್ಣಕರ ಮತ್ತು ಆರೋಪಿ ಕೂಡಿಕೊಂಡು ಬೆಳಗಾವಿಯ ಪಿಜಿ ಗಾಳಿ ಅಂಡ ಕಂಪನಿಯಲ್ಲಿ ನಮ್ಮ ಸಂಸ್ಥೆಯ ಆಡಿಟ್ ಮಾಡಿಸಿರುತ್ತಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ನಾನು ಸಂಸ್ಥೆಯ ಚೇರಮನ ಆಗಿದ್ದು ನನಗೆ ಈ ವಿಷಯ ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗೆ ಈ ಪ್ರಕರಣದಲ್ಲಿ ನನ್ನ ಹೇಳಿಕೆಯನ್ನು ನಾವು ಮಾಡಿಸಿದ ಆಡಿಟ್ ರಿಪೋರ್ಟ ಗಳ ಆಧಾರದ ಮೇಲೆ ಹೇಳಿರುತ್ತೇನೆ. ಆಡಿಟ್ ರಿಪೋರ್ಟ ಸ್ವೀಕರಿಸಿದ ದಿನಾಂಕ ನನಗೆ ತಿಳಿದಿರುವುದಿಲ್ಲ. ನಾವು ಮಾಡಿಸಿದ ಆಡಿಟ್ ರಿಪೋರ್ಟ ದಿಃ 11-05-2010 ರಂದು ತಯಾರಾಗಿರುತ್ತದೆ ಎಂದರೆ ಸರಿ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿದಂತೆ ಚಾಸಾ 11 ರವರು ಕೆಲವು ದಾಖಲಾತಿಗಳನ್ನು ದಿಃ 10-12-2011 ರಂದು ತನಿಖಾಧಿಕಾರಿಗೆ ನೀಡಿರುತ್ತಾರೆ ಎಂದರೆ ಸರಿ. ಆಡಿಟ್ ಆದ ಒಂದು ವರ್ಷದ ನಂತರ ಆಡಿಟ್ ದಾಖಲಾತಿಗಳು ಚಾಸಾ 11 ರವರಿಂದ ತನಿಖಾಧಿಕಾರಿ ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ಚಾಸಾ 11 ರವರು ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದಾರೆ ಎಂದು ಹೇಳಿದ್ದು ಸದರಿ ದಾಖಲಾತಿಗಳು ಅವರ ವಶದಲ್ಲಿದ್ದವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ 11 ರವರು ಕೇಳಕರ ಶಾಲೆಯ ಹೆಚ್ ಎಮ್ ಇದ್ದರು ಎಂದರೆ ಸರಿ. 2008 ರಿಂದ 2010 ರವರೆಗೆ ಚಾಸಾ 11 ರವರು ಕೇಳಕರ ಶಾಲೆಯ ಹೆಚ್ ಎಮ್ ಆಗಿದ್ದರಿಂದ ಶಾಲೆಗೆ ಸಂಬಂಧಿಸಿದ ದಾಖಲಾತಿಗಳು ಅವರು ಬಳಿಯಲ್ಲಿ ಇದ್ದವು ಎಂದರೆ ನನಗೆ ನೆನಪಿರುವುದಿಲ್ಲ. ಆ ಸಮಯದಲ್ಲಿ ಚಾಸಾ 1 ರವರು ಉಪಾಧ್ಯಕ್ಷರಿದ್ದರಿಂದ ಈ ವಿಚಾರ ಅವರಿಗೆ ತಿಳಿದಿರುತ್ತದೆ. ಆಡಿಟ್ ರಿಪೋರ್ಟ ನ ಅಂಶಗಳು ಮತ್ತು ದಾಖಲಾತಿಗಳು ಯಾರ ಕಬ್ಜೆಯಲ್ಲಿ ಇರುತ್ತವೆ ಎಂದು ಉಪಾಧ್ಯಕ್ಷರಿಗೆ ತಿಳಿದಿದ್ದರಿಂದ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ಈ ಮೇಲೆ ಹೇಳಿದ ಎಲ್ಲಾ ದಾಖಲಾತಿಗಳು ಚಾಸಾ 11 ರವರ ವಶದಲ್ಲಿ ಇದ್ದರಿಂದ ಅವರೇ ತಿದ್ದಿರುತ್ತಾರೆ ಎಂದರೆ ಸರಿಯಲ್ಲ. ಪ್ರಕರಣದ ಆರೋಪಿ ನಮ್ಮ ಶಾಲೆಯ ಹೆಚ್ ಎಮ್ ಆಗಿದ್ದರಿಂದ ಆತನನ್ನು ಆ ಸ್ಥಾನದಿಂದ ಕೆಳಗಿಳಿಸಿ ಚಾಸಾ 11 ರವರು ಹೆಚ್ ಎಮ್ ಆಗಲು ಬಯಸಿದ್ದರಿಂದ ಎಲ್ಲಾ ದಾಖಲಾತಿಗಳನ್ನು ಚಾಸಾ 1 ರವರ ಮಾತು ಕೇಳಿಕೊಂಡು ಚಾಸಾ 11 ರವರು ತಿದ್ದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-12 ರಲ್ಲಿ

ನಿಡಿ-1 ಎಂದು ಗುರುತಿಸಲಾದ ಭಾಗದಲ್ಲಿ 2006-07 ರಸೀದಿ ಬುಕಗಳನ್ನು ಒದಗಿಸಿದ್ದು ಪಿ ರೆಜಿಸ್ಟರ ಒದಗಿಸಿರುವುದಿಲ್ಲ, ಶಾಲಾ ಶುಲ್ಕವನ್ನು ರಸೀದಿ ಬುಕ ಆಧಾರದ ಮೇಲೆ ತೆಗೆದುಕೊಂಡಿರುತ್ತಾರೆಂದು ನಮೂದಿಸಿರುತ್ತಾರೆ ಎಂದರೆ ಸರಿ. ನಿಪಿ-10 ರಲ್ಲಿ ಪೇಜ್ ನಂಬರ 12/6 ಜನರಲ್ ರಿಮಾರ್ಕ್ಸ್ ಸಂಖ್ಯೆ 1 ರಲ್ಲಿ ಹೆಚ್ ಎಮ್ ಯಾವುದೇ sanction ಮಾಡಿರುವುದಿಲ್ಲ ಮತ್ತು 2003-04 ರಿಂದ 2008-09 ರವರೆಗಿನ payment voucher ಗಳಿಗೆ ಸಹಿ ಮಾಡಿರುವುದಿಲ್ಲ ಎಂದು ನಮೂದಾಗಿರುತ್ತದೆ ಎಂದರೆ ಈ ವಿಚಾರ ಉಪಾಧ್ಯಕ್ಷರಿಗೆ ತಿಳಿದಿರುತ್ತದೆ ನನಗೆ ತಿಳಿದಿರುವುದಿಲ್ಲ. ನಿಪಿ-10 ರಲ್ಲಿರುವ ಅಂಶಗಳು ಉಪಾಧ್ಯಕ್ಷರಿಗೆ ತಿಳಿದಿರುತ್ತದೆ ನನಗೆ ತಿಳಿದಿರುವುದಿಲ್ಲ.

ನಾನು ಕೇಳಕರ ಸಂಸ್ಥೆಯ ಚೇರಮನ ಆಗಿ ಪ್ರಸ್ತುತ ಪ್ರಕರಣದ ಆರೋಪಿಗೆ ಬ್ಯಾಂಕಿನ ವ್ಯವಹಾರಗಳನ್ನು ನೀವು ನೋಡಿಕೊಳ್ಳಬೇಡಿ, ಚಾಸಾ 11 ರವರಿಗೆ ಹಸ್ತಾಂತರಿಸಿ ಎಂದು ಒಂದು ಪತ್ರ ವ್ಯವಹಾರ ಮಾಡಿರುತ್ತೇನೆ ಎಂದರೆ ಸರಿ. ದಿಃ 25-05-2008 ರಂದು ಪ್ರಸ್ತುತ ಪ್ರಕರಣದ ಆರೋಪಿಗೆ ಬ್ಯಾಂಕಿನ ವ್ಯವಹಾರಗಳನ್ನು ನೀವು ನೋಡಿಕೊಳ್ಳಬೇಡಿ, ಚಾಸಾ 11 ರವರಿಗೆ ಹಸ್ತಾಂತರಿಸಿ ಎಂದು ಒಂದು ಪತ್ರ ವ್ಯವಹಾರ ಮಾಡಿರುತ್ತೇನೆ ಎಂದರೆ ಸರಿ. ಆರೋಪಿ ನನಗೆ ದಿಃ 20-02-2006 ರಂದು ಗ್ರಂಥ ಪಾಲಕರು ಮತ್ತು ಕಾರ್ಯದರ್ಶಿಯವರು ಸರಿಯಾಗಿ ಲೆಕ್ಕ ಇಡುತ್ತಿಲ್ಲ ಎಂದು ಒಂದು ಪತ್ರ ವ್ಯವಹಾರ ಮಾಡಿರುತ್ತಾರೆ ಎಂದರೆ ಸರಿ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನಾನು ಮತ್ತು ಚಾಸಾ 1 ರವರ ಸೇರಿಕೊಂಡು ಚಾಸಾ 11 ರವರ ಮಾತು ಕೇಳಿಕೊಂಡು ಆರೋಪಿಯನ್ನು ಪ್ರಸ್ತುತ ಪ್ರಕರಣದಲ್ಲಿ ಸುಳ್ಳಾಗಿ ಸಿಕ್ಕಿಹಾಕಿಸಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ತಪ್ಪು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಶಾಲಾ ಲೆಕ್ಕ ಪತ್ರಗಳನ್ನು ಸರಿಯಾಗಿ ಇಟ್ಟಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2008 ರಲ್ಲಿ ನಮ್ಮ ಶಾಲೆಯ ಆಡಿಟ್ ಮಾಡಿಸಿದಾಗ ಆರೋಪಿ ರೂ. 1,72,901.06/- ಹಣ ದುರ್ಬಳಕೆ ಮಾಡಿಕೊಂಡಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-19 ರಲ್ಲಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

CC No. 437/2014
PW- 5

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ. ದಂ.,
ಮೂಡಲಗಿ.